ದಿನಾಂಕ 11-02-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ** ಶ್ರೀ ಡಿ ಜಿ ಪಿ ಯವರಿಂದಃ

6. ಈಗ ನ್ಯಾಯಾಲಯದಲ್ಲಿ ಕುಳಿತಿರುವ ವಿಷ್ಣುಮೂರ್ತಿ ಉಪಾಧ್ಯಾಯ ಅವರು ಪುತ್ತಿಗೆ ಮಠದ ಮ್ಯಾನೇಜರ್ ಆಗಿರುತ್ತಾರೆ. ಅವರು ಈ ಕೇಸಿನ ವಿಚಾರಣೆಯ ಪ್ರತೀ ಸಮಯದಲ್ಲಿ ಹಾಜರಾಗಿರುತ್ತಾರೆ ಎಂದರೆ ಸರಿ. ವಾದಿ ದೇವಸ್ಥಾನಗಳು ಕೃಷ್ಣ ಮಠಕ್ಕೆ ಸಂಬಂದಪಟ್ಟದ್ದು ಎಂಬ ಬಗ್ಗೆ ನನ್ನ ಹೇಳಿಕೆ ಬಿಟ್ಟರೆ ಬೇರೆ ದಾಖಲೆಗಳು ಇಲ್ಲ. 1997 ಕರ್ನಾಟಕ ಹಿಂದೂ ರಿಲೀಜಿಯಸ್ ಮತ್ತು ಚಾರಿಟೇಬಲ್ ಎಂಡೋಮೆಂಟ್ ಆಕ್ಟ್ ಬಗ್ಗೆ ಮಾಹಿತಿ ಇರುವುದಿಲ್ಲ. ನನ್ನ ಪ್ರಮಾಣ ಪತ್ರವನ್ನು ತಯಾರು ಮಾಡುವಾಗ ಓದಿ ನೋಡಿರುತ್ತೇನೆ, ಅದನ್ನು ತಯಾರಿಸಲು ಬೋಸ್ ಎಂಬ ನೋಟರಿ ಅವರ ಬಳಿ ಹೋಗಿರುತ್ತೇನೆ. ಸಾಕ್ಷಿ ಪುನಃ ನನಗೆ ನೋಟರಿ ಹೆಸರು ನೆನಪಿಲ್ಲ ಎಂದು ನುಡಿಯುತ್ತಾರೆ. ವಿಷ್ಣುಮೂರ್ತಿ ಉಪಾಧ್ಯಾಯ ಅವರು ಕೋರ್ಟ್‌ಗೆ ಬರುತ್ತಾರೆ, ಆದರೆ ಕೇಸಿನ ಬಗ್ಗೆ ಏನೂ ಹೇಳುವುದಿಲ್ಲ. ಈ ಕೇಸಿನಲ್ಲಿ ಅವರ ವಿಚಾರಣೆ ಆಗಿದೆಯೋ, ಇಲ್ಲವೋ ನನಗೆ ಗೊತ್ತಿಲ್ಲ. ಕೃಷ್ಣನ ದೇವಸ್ಥಾನದಲ್ಲಿ ಪೂಜೆಗಳು ಎರಡು ತಿಂಗಳಿಗೊಮ್ಮೆ ಬದಲಾವಣೆಯಾಗುತ್ತಿತ್ತು ಎಂಬುದನ್ನು ನಾನು ಹಿರಿಯರಿಂದ ಕೇಳಿ ತಿಳಿದುಕೊಂಡಿದ್ದೇನೆ, ನನಗೆ ವೈಯ್ಯಕ್ತಿಕವಾಗಿ ಗೊತ್ತಿಲ್ಲ. ಆ ರೀತಿ ಹೇಳಿದ ಹಿರಿಯರು ಯಾರು ಎಂದರೆ ಸಾಕ್ಷಿ ನಮ್ಮ ಗುರುಗಳಾಗಿರುತ್ತಾರೆ, ಅವರ ಹೆಸರು ಹೇಳಲು ಆಗುವುದಿಲ್ಲ ಎನ್ನುತ್ತಾರೆ.

7. ಶಿರೂರು ಮಠದ ಸ್ವಾಮಿಜಿಯವರು ಮೃತ ಪಟ್ಟ ನಂತರ ಅವರ ಸ್ಥಾನಕ್ಕೆ ಯಾರು ನೇಮಕವಾಗಿಲ್ಲ ಎಂದರೆ ಸಾಕ್ಷಿ ಅದು ಈ ವಿಚಾರಕ್ಕೆ ಸಂಬಂದಪಟ್ಟಿಲ್ಲ ಎಂದು ನುಡಿಯುತ್ತಾರೆ. ಶಿರೂರು ಮಠದ ಸ್ವಾಮಿಜಿಯವರು ಎರಡು ವರ್ಷದ ಹಿಂದೆ ಮೃತಪಟ್ಟಿರುತ್ತಾರೆ. ಆ ಸ್ಥಾನ ಈಗ ಖಾಲಿ ಇದೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಅಚ್ಯುತ ಪ್ರೇಕ್ಷಾಚಾರ್ಯರು ಉಡಪಿಯವರು. ಅವರ ಹುಟ್ಟೂರು ಯಾವುದು ಎಂದು ನನಗೆ ಗೊತ್ತಿಲ್ಲ. ನನಗೆ ಅವರ ಬಗ್ಗೆ ಬೇರೆ ಯಾವುದೇ ಮಾಹಿತಿ ಗೊತ್ತಿಲ್ಲ. ಅಚ್ಯುತ ಪ್ರೇಕ್ಷಾಚಾರ್ಯರಿಗೆ ಮಠ ಇತ್ತು. ಅವರು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಭೀಮನ ಕಟ್ಟೆ ಮಠಕ್ಕೆ ಸೇರಿದವರು.

ಉಡುಪಿಯಿಂದ ಸದರಿ ಬೀಮನಕಟ್ಟೆ ಮಠ 70 ಕಿ.ಮೀ ಆಗಬಹುದು. ಐತಾಳ ಪಂಗಡದವರು ಕೋಟ ಬ್ರಾಹ್ಮಣರು ಎಂದರೆ ನನಗೆ ಮಾಹಿತಿ ಇಲ್ಲ. ಐತಾಳರು ಶಿವಭಕ್ತರು ಎಂದರೆ ಸಾಕ್ಷಿ ನನಗೆ ಅವರ ಪೂರ್ವ ಇತಿಹಾಸ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಾದಿ ದೇವಸ್ಥಾನಕ್ಕೆ ಸಂಬಂದಪಟ್ಟ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಸಾರ್ವಜನಿಕರಿಂದ ಒಬ್ಬೊಬ್ಬರನ್ನು ಆಯ್ಕೆ ಮಾಡಿ ಕಮಿಟಿ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ವಾದಿ ದೇವಸ್ಥಾನಗಳ ಆಡಳಿತ ಹೇಗೆ ನಡೆಯುತ್ತಿತ್ತು, ಯಾರಿಂದ ನಡೆಯುತ್ತಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ಕೆಲವು ವಿಷಯಗಳ ಬಗ್ಗೆ ನಮ್ಮ ವಕೀಲರಿಗೆ ನಾನು ಅದನ್ನು ತಯಾರಿಸುವಾಗ ಮಾಹಿತಿ ನೀಡಿರುತ್ತೇನೆ. ನಾನು ಮಾಹಿತಿ ಕೊಡದ ಕೆಲವು ಮಾಹಿತಿಗಳು ನನ್ನ ಪ್ರಮಾಣ ಪತ್ರದಲ್ಲಿ ಇದೆ ಎಂದರೆ ಸರಿ.

8. ವಾದಿ ದೇವಸ್ಥಾನಗಳ ರಥೋತ್ಸವ ಏಳ್ನೂರು ಎಳುನೂರು ವರ್ಷ ಕಾಲದಿಂದ ನಡೆಯುತ್ತಿತ್ತು ಎಂಬ ಬಗ್ಗೆ ಮಧ್ವ ವಿಜಯ ಪುಸ್ತಕದ ಆಧಾರದಿಂದ ಹೇಳುತ್ತಿದ್ದೇನೆ. ಮಧ್ವ ವಿಜಯವನ್ನು ನಾರಾಯಣ ಪಂಡಿತರು ಬರೆದಿರುತ್ತಾರೆ. ಮಧ್ವ ವಿಜಯವನ್ನು ಬರೆದವರು ಮಧ್ವಾಚಾರ್ಯರ ಕಾಲದವರು. ಮಧ್ವ ವಿಜಯದಲ್ಲಿ ಸ್ಕಂದ ಪುರಾಣದ ಬಗ್ಗೆ ಬರೆದಿರುವುದಿಲ್ಲ. ವಾದಿ ದೇವಸ್ಥಾನಗಳ ಬಗ್ಗೆ ನನಗೆ ಯಾವುದೆ ಮಾಹಿತಿ ಇಲ್ಲ, ಅವರು ಹೇಳಿಕೊಟ್ಟದ್ದನ್ನು ನಾನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕೃಷ್ಣ ಪರಮಾತ್ಮ ಯಾದವ ಸಮುದಾಯಕ್ಕೆ ಸೇರಿದವರು. ಗೊಲ್ಲ ಸಮುದಾಯಕ್ಕೆ ಸೇರಿದವರು ಉಡುಪಿಯಲ್ಲಿ ಯಾರೂ ಇಲ್ಲ ಎಂದರೆ ಸಾಕ್ಷಿ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ವಾದಿ ದೇವಸ್ಥಾನಗಳು ಸಾರ್ವಜನಿಕ ದೇವಸ್ಥಾನಗಳಾಗಿದ್ದು, ಅದನ್ನು ಸಾರ್ವಜನಿಕ ದೇವಸ್ಥಾನ ಅಲ್ಲ ಎಂದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಉಡುಪಿ.